25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ **Karnataka State Road Transport Corporation**
"ಸಾರಿಗೆ ಭವನ", ಕೇಂದ್ರ ಕಛೇರಿ, "Transport House", Central Offices,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027 Shanthinagar, Bengaluru-560 027
ದೂರವಾಣಿ ಸಂಖ್ಯೆ: 080-22221321 Tel: 080-22221
ವೆಬ್-ಸೈಟ್: www.ksrtc.in Website: www.ksrtc.in

**ಸಂ:ಕರಾಸಾ/ಕೇಂಕ/ಸಂ/ಕಾ/ಕೋವಿಡ್/ 2053 /20-21** **ದಿನಾಂಕ: 18/12/2020**

ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕ.ರಾ.ರ.ಸಾ.ನಿಗಮ.

ಮಾನ್ಯರೇ,

**ವಿಷಯ:-** ದಿನಾಂಕ 01.02.2021 ರಿಂದ ಹೊಸ ಡ್ಯೂಟಿರೋಟಾ ಅನುಷ್ಠಾನ ಮಾಡುವ ಬಗ್ಗೆ

+ + +

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಲಾಕ್‌ಡೌನ್ ತೆರುವುಗೊಳಸಿದ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಿರುವುದು ಸರಿಯಷ್ಟೆ. ಆದರೆ ಸಾರ್ವಜನಿಕ ಪ್ರಯಾಣಕರಿಂದ ಸಾರಿಗೆ ಸೇವೆಗಳ ಬೇಡಿಕೆ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಲಾಕ್‌ಡೌನ್ ಮುಂಚಿತ ದಿನಗಳಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಪ್ರಮಾಣದಲ್ಲಿ ಅನುಸೂಚಿಗಳ ಕಾರ್ಯಾಚರಣೆಯನ್ನು ಮಾಡಲು ಸಾಧ್ಯವಾಗದೇ ಇರುವುದು ಮತ್ತು ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಮಾತ್ರ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.

ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಅನುಸೂಚಿಗಳನ್ನು ಯೋಜಿಸಿ ಹೊಸದಾಗಿ ಕೌನ್ಸಿಲಿಂಗ್ ಮಾಡಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು **ದಿನಾಂಕ 01.02.2021 ರಿಂದ ಜಾರಿಗೆ ಬರುವಂತೆ** ಹೊಸ ಡ್ಯೂಟಿರೋಟಾ ಪದ್ಧತಿಯನ್ನು ಅನುಷ್ಠಾನ ಮಾಡಲು ತಿಳಿಸಲಾಗಿದೆ.

ಸದರಿ ಡ್ಯೂಟಿರೋಟಾ ಮಾಡುವಾಗ ಸುತ್ತೋಲೆ ಸಂಖ್ಯೆ 1192 ದಿನಾಂಕ 21.09.2013 ಅನ್ವಯ ಸೂಕ್ತ ಕ್ರಮ ಕೈಗೊಳ್ಳುವುದು. ಮುಂದುವರೆದು, ವಿಷಯವು ಅತಿ ಸೂಕ್ಷ್ಮವಾಗಿರುವುದರಿಂದ ಚಾಲನಾ ಸಿಬ್ಬಂದಿಗಳಿಂದ ಯಾವುದೇ ರೀತಿಯ ದೂರುಗಳಿಗೆ ಅವಕಾಶ ನೀಡದಂತೆ ಅವಶ್ಯ ಕ್ರಮ ಕೈಗೊಳ್ಳುವುದು ಮತ್ತು ಕೈಗೊಂಡ ಕ್ರಮದ ಕುರಿತು ಅನುಸರಣಾ ವರದಿಯನ್ನು ಈ ಕಛೇರಿಗೆ ಕಳುಹಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

18/12/20

**ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)**